ಡಿಡಕ್ಷನ್ 50 ಸಾವಿರ ರೂ. ಮತ್ತು 4.25 ಲಕ್ಷ ತೆರಿಗೆ ವಿನಾಯಿತಿ (ಹೋಮ್‌ಲೋನ್, ವಿಮೆ ಇತ್ಯಾದಿ) ತೋರಿಸಿದರೆ, 20.25 ಲಕ್ಷ ರೂ.ಗೆ ತೆರಿಗೆ ಕಟ್ಟಬೇಕಾಗುತ್ತದೆ. ಈ ಮೊತ್ತಕ್ಕೆ 4.37 ಲಕ್ಷ ರೂ. ತೆರಿಗೆ ತೆರಬೇಕು. ಒಂದು ವೇಳೆ ರಮೇಶ ಹೊಸ ತೆರಿಗೆ ಪಾವತಿ ಪದ್ಧತಿಯನ್ನು ಆಯ್ಕೆ ಮಾಡಿಕೊಂಡರೆ, ಸ್ಟ್ಯಾಂಡರ್ಡ್ ಡಿಡಕ್ಷನ್ 50 ಸಾವಿರ ರೂ.ಗಳನ್ನಷ್ಟೇ ತೋರಿಸಬಹುದು. ಉಳಿಕೆ 24.50 ಲಕ್ಷ ರೂ. ಆದಾಯಕ್ಕೆ 4.52 ಲಕ್ಷ ರೂ. ತೆರಿಗೆ ಕಟ್ಟುವುದು ಅನಿವಾರ್ಯ. ಹಳೆಯ ಪದ್ಧತಿಯಿಂದ ರಮೇಶ 15 ಸಾವಿರ ರೂ. ಉಳಿತಾಯ ಮಾಡಬಹುದಾಗಿದೆ.

- 10 ಲಕ್ಷ ರೂ. ಆದಾಯ ಪಡೆಯುವ ವೈದ್ಯೆ ಡಾ. ಶ್ರೀಲಲಿತಾ ವಿಷಯದಲ್ಲಿ ತೆರಿಗೆ ಲೆಕ್ಕಾಚಾರವನ್ನು ನೋಡೋಣ. ಆಕೆ 50 ಸಾವಿರ ರೂ. ಸ್ಟ್ಯಾಂಡರ್ಡ್ ಡಿಡಕ್ಷನ್ ಮತ್ತು '80ಸಿ' ಅನ್ವಯ 2.50 ಲಕ್ಷ ರೂ. ತೆರಿಗೆ ವಿನಾಯಿತಿಯನ್ನು ಪಡೆಯಬಹುದು. ಉಳಿಕೆ 7 ಲಕ್ಷ ರೂ.ಗೆ ತೆರಿಗೆಯಾಗಿ 54,600 ರೂಪಾಯಿ ಪಾವತಿಸಬೇಕು. ಹೊಸ ತೆರಿಗೆ ಪಾವತಿ ಪದ್ಧತಿಯಲ್ಲೂ ಇಷ್ಟೇ ಮೊತ್ತ, 54,600 ರೂ.ಗಳನ್ನು ತೆರಿಗೆ ತೆರಬೇಕು. ಹೀಗಾಗಿ, ಹೊಸ ಅಥವಾ ಹಳೆ ತೆರಿಗೆ ಪದ್ಧತಿಯಲ್ಲಿ ಯಾವುದನ್ನು ಆಯ್ಕೆ ಮಾಡಿದರೂ ಶ್ರೀಲಲಿತಾ ಅವರ ವಿಷಯದಲ್ಲಿ ಅಂಥಾ ವ್ಯತ್ಯಾಸವೇನೂ ಇಲ್ಲ.
- 6 ಕೋಟಿ ರೂಪಾಯಿ ಆದಾಯ ಹೊಂದಿರುವ ಉದ್ಯಮಿ ಗೌರಿತನಯ ಅವರು ಹಳೇ ತೆರಿಗೆ ಪದ್ಧತಿಯನ್ನು ಆಯ್ದುಕೊಂಡು 24.50 ಲಕ್ಷ ರೂ. ಡಿಡಕ್ಷನ್ ಮತ್ತು 50 ಸಾವಿರ ರೂ. ಸ್ಟ್ಯಾಂಡರ್ಡ್ ಡಿಡಕ್ಷನ್ ಕ್ಲೇಮ್ ಮಾಡಿಕೊಂಡರೂ, ಉಳಿಕೆ 5.75 ಕೋಟಿ ರೂ.ಗೆ 2.43 ಕೋಟಿ ರೂ. ತೆರಿಗೆ ತೆರಬೇಕು. ಹೊಸ ತೆರಿಗೆ ಪದ್ಧತಿಗೆ ಬಂದರೆ, ಇಲ್ಲಿ 50 ಸಾವಿರ ಸ್ಟ್ಯಾಂಡರ್ಡ್ ಡಿಡಕ್ಷನ್ ತೋರಿಸಿ, ಉಳಿಕೆ 59.95 ಲಕ್ಷ ರೂ.ಗೆ 2.29 ಕೋಟಿ ರೂ. ತೆರಿಗೆ ಕಟ್ಟಬೇಕು. ಇಲ್ಲಿ ಗೌರಿತನಯರಂಥ ದೊಡ್ಡ ಶ್ರೀಮಂತರಿಗೆ (ಸೂಪರ್‌ರಿಚ್) ಹೊಸ ತೆರಿಗೆ ಪದ್ಧತಿಯು ಅನುಕೂಲ. ಅಲ್ಲದೇ, 5 ಕೋಟಿ ರೂ.ಗೂ ಹೆಚ್ಚಿನ ಆದಾಯ ಹೊಂದಿರುವ ಮಂದಿಯ ತೆರಿಗೆ ವಿಧಿಸುವ ಉಪಕರವನ್ನು ಶೇ.37ರಿಂದ 25ಕ್ಕೆ ಇಳಿಸಲಾಗಿದೆ.
- ಹೊಸ ತೆರಿಗೆ ಪದ್ಧತಿಯಲ್ಲಿ ತೆರಿಗೆ ವಿನಾಯಿತಿ ಮಿತಿ ಮೊದಲು 2.5 ಲಕ್ಷ ರೂ.ನಿಂದ ಆರಂಭವಾಗುತ್ತಿತ್ತು. ಈಗ ಮೂಲ ವಿನಾಯಿತಿ ಮಿತಿಯನ್ನು 50 ಸಾವಿರ ಹೆಚ್ಚಿಸಿದ್ದು 3 ಲಕ್ಷ ರೂ.ನಿಂದ ಶುರುವಾಗುತ್ತದೆ.

ಏಪ್ರಿಲ್ 1ರಿಂದ ಹೊಸ ಲೆಕ್ಕ

ಪ್ರಸಕ್ತ ಹಣಕಾಸು ವರ್ಷ ಮಾರ್ಚ್ 31ಕ್ಕೆ ಮುಕ್ತಾಯವಾಗಲಿದ್ದು, ಆದಾಯ ತೆರಿಗೆ ಉಳಿಸಲು ಇನ್ನೂ ದಾರಿಗಳಿವೆ. ಮಾರ್ಚ್ 31ರೊಳಗೆ ನೀವು ನೀಡುವ ದೇಣಿಗೆಗಳು, ವಿಮೆ ಅಥವಾ ಉಳಿತಾಯ ಯೋಜನೆಗಳ ಪ್ರೀಮಿಯಂಗಳು ತೆರಿಗೆ ವಿನಾಯಿತಿ ವ್ಯಾಪ್ತಿಗೆ ಬರುತ್ತವೆ. ಮಾರ್ಚ್ 31ರೊಳಗೆ ಉಳಿತಾಯ ಮಾಡಿ, ತೆರಿಗೆ ಕಡಿತದಿಂದ ತಪ್ಪಿಸಿಕೊಳ್ಳಿ ಎನ್ನುವುದು ಹೂಡಿಕೆ ತಜ್ಞರ ಸಲಹೆ.

ಇನ್ನು ಏ.1ರಿಂದ ಹೊಸ ಹಣಕಾಸು ವರ್ಷ ಆರಂಭವಾಗಲಿದೆ. ವೇತನ ಏರಿಕೆ ಅಥವಾ ನಿಮ್ಮ ಆದಾಯದಲ್ಲಿನ ಏರಿಕೆಗೆ ಅನುಗುಣವಾಗಿ ತೆರಿಗೆ